ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 75-83
©*IIMRD*, Mysuru
IIMRD JOURNALS
www.iimrd.com

ಕರ್ನಾಟಕದಲ್ಲಿ ಪುರವಂತರ ಗುಗ್ಗಳ ಸೇವೆ

ರಾಮಣ್ಣ[1] ಮತ್ತು ಡಾ.ವ್ಹಿ.ಎಲ್.ಪಾಟೀಲ[2]
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಜಾನಪದ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಾರಾಂಶ: (Abstract)

ಗ್ರಾಮೀಣ ಜನಪದ ಜೀವನದಲ್ಲಿ ಅನಾದಿಕಾಲದಿಂದಲೂ ಹಾಸುಹೊಕ್ಕಾಗಿ ಬೆರೆತು ಬಂದಿರುವ ಗ್ರಾಮದೇವತೆಗಳು ಜನಪದರ ಬದುಕಿನ ಒಂದು ಭಾಗವೆನಿಸಿಕೊಂಡಿದೆ. ಒಂದು ದೇವತೆಗೆ ಸಂಬಂಧಿಸಿದ ಹಾಡು, ಕಥೆ, ಐತಿಹ್ಯ, ದಂತಕಥೆ, ಪುರಾಣದಲ್ಲಿ ಆಯಾ ಸಮುದಾಯಗಳ ಹಲವು ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಾಧ್ಯವಿದೆ. ಒಂದು ನಿರ್ದಿಷ್ಟ ದೇವತೆಯ ಅಧ್ಯಯನದಿಂದ ಆ ದೇವತೆಯನ್ನು ಪೂಜಿಸುವ ಜನರ ಜೀವನಶೈಲಿ, ಚಿಂತನ ವಿಧಾನಗಳು ಅನಾವರಣಗೊಳ್ಳುತ್ತ ಹೋಗುತ್ತವೆ. "ಸಾಮಾನ್ಯವಾಗಿ ದ್ರಾವಿಡ ಮೂಲ ದೇವತೆಗಳೆಲ್ಲ ಸ್ತ್ರೀ ರೂಪದಲ್ಲಿಯೇ ಹೆಚ್ಚಾಗಿ ಪೂಜಿಸಲ್ಪಡುತ್ತಿವೆ. ಅನಂತರ ಇಂಡೋ – ಆರ್ಯನ್ ಸಂಸ್ಕೃತಿಯು ವ್ಯಾಪಕವಾಗಿ ಅರಳಿಕೊಂಡಾಗ ಶಿವ, ವಿಷ್ಣು, ಕೃಷ್ಣ ಮತ್ತು ವೀರಭದ್ರ ಮುಂತಾದ ಪುರುಷ ದೇವತೆಗಳು ಪೂಜೆಗೆ ಅರ್ಹರಾದರು".[1]

ಮುಖ್ಯಪದಗಳು (Keywords): *ಜಾನಪದ, ಜನಪದ ಆಚರಣೆ, ಕರ್ನಾಟಕ, ಪುರವಂತರು, ಗುಗ್ಗಳ ಸೇವೆ, ವೀರಭದ್ರ*

ಪೀಠಿಕೆ

ಕಷ್ಟ ಪರಿಹಾರಾರ್ಥಕವಾಗಿ, ನಿರ್ದಿಷ್ಟ ದೈವಕ್ಕೆ ಹೊತ್ತ ಹರಕೆ ತೀರಿಸುವಿಕೆಯನ್ನು ವಿಶಿಷ್ಟ ಆಚರಣೆಗಳಲ್ಲಿ ಕಾಣುತ್ತೇವೆ. ಇಂತಹ ಆಚರಣೆಗಳಲ್ಲಿ ಅನೇಕ ಪ್ರಕಾರಗಳುಂಟು, ಇವು ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ಸಾಕಷ್ಟು ವ್ಯತ್ಯಾಸಗಳನ್ನು ಪಡೆದುಕೊಂಡು ಬಳಕೆಯಲ್ಲಿವೆ. ಉತ್ತರ ಕರ್ನಾಟಕದಲ್ಲಿ ಶಿವ–ವಿಷ್ಣು, ದುರ್ಗೆ, ಕಾಳಿ, ಮಹಿಷಮರ್ದಿನಿ, ಮಾರಿ, ಎಲ್ಲಮ್ಮ–ದ್ಯಾಮಮ್ಮ, ಮುಂತಾದ ಹಲವಾರು ದೇವತೆಗಳು ಕಂಡುಬರುತ್ತಾರೆ. ಅದರಂತೆ ಆಚರಣೆಯಲ್ಲಿ, ಆರಾಧನ ಪರಂಪರೆಯಲ್ಲಿ ವಿಶಿಷ್ಟತೆ ಹೊಂದಿರುವ ವೀರಭದ್ರ ದೇವರ ಕುರಿತು ಅಧ್ಯಯನ ಮಾಡುವುದು ಇಂದಿನ ಪ್ರಧಾನ ಅವಶ್ಯಕತೆ ಇದೆ.

ಉತ್ತರ ಕರ್ನಾಟಕದ ಎಲ್ಲಮ್ಮನ ಜೋಗತಿ–ಜೋಗಪ್ಪಗಳು, ಅಂಬಾಭವಾನಿಯ ಭೂತ್ಯಾಗಳು, ತಿರುಪತಿ ತಿಮ್ಮಪ್ಪನ ಆರಾಧಕರಾದ ದಾಸರು, ಅಲ್ಲದೆ ಪೋತರಾಜರು, ಈರಗಾರರು, ಕಾರಣಿಕದವರು, ಮೈಲಾರದ–ಗೊರವಪ್ಪನವರು ಜಿರ್–ಬುರ್ ಬಾರಿಸುವ ದುರುಗಮುರುಗಿಯರು ಮತ್ತು ಗೊಂದಲಿಗರು ಈ ಮುಂತಾದವರು ಹೀಗೆ ಜಾನಪದ ಹಿನ್ನೆಲೆಯನ್ನು ಸಾರುವ ಸಾಂಸ್ಕೃತಿಕ ಪರಂಪರೆಯ ದೊಡ್ಡ

Please cite this article as: ರಾಮಣ್ಣ ಮತ್ತು ವ್ಹಿ.ಎಲ್.ಪಾಟೀಲ. (2026). ಕರ್ನಾಟಕದಲ್ಲಿ ಪುರವಂತರ ಗುಗ್ಗಳ ಸೇವೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4).* ಪು.ಸಂ. 75–83

ಸಮುದಾಯವೇ ಇಲ್ಲಿದೆ. ಇವರ ಆಚರಣೆಯ ಪರಂಪರೆಯು ತುಂಬಾ ವಿಶಿಷ್ಟವಾಗಿ ಕಂಡುಬರುತ್ತಿದ್ದು, ಆದರೆ ಇದಕ್ಕೂ ಸ್ವಲ್ಪ ಸುಧಾರಿಸಿದ ಮತ್ತು ವ್ಯವಸ್ಥಿತ ಹಿನ್ನಲೆಯುಳ್ಳ ಆರಾಧನ ಪರಂಪರೆ ವೀರಭದ್ರನ ಆಚರಣೆಯಲ್ಲಿದೆ.

"ವೀರಭದ್ರ ದೇವರ ಆಚರಣೆಯಲ್ಲಿ ಪುರವಂತರ ವೈವಿಧ್ಯಮಯವಾದ ಪರಂಪರೆಯು ನಿಚ್ಚಳವಾಗಿ ಕಾಣುವುದು. ಕಾವಿಯನ್ನು ತೊಟ್ಟು ಕಿವಿಯಲ್ಲಿ ನಾಗಮುರಗಿ, ಕೈಯಲ್ಲಿ ಖಡ್ಗ, ಎರಡು ತೋಳುಗಳಲ್ಲಿ ಚೌಡಿ, ಕಿಬ್ಬೊಟ್ಟೆಯ ಸ್ವಲ್ಪ ಕೆಳಭಾಗದಲ್ಲಿ ಹೊಯ್ಸಳ ಲಾಂಛನದಂತ ವೈಶಿಷ್ಟವಿರುವ ಕಂಚಿನಮುಖ, ಮುಂತಾದ ಆಭರಣಗಳು ಪುರವಂತರ ವಿಶೇಷತೆಯನ್ನು ತೋರಿಸುತ್ತವೆ. ಅವನ್ನೆಲ್ಲ ಧರಿಸಿಕೊಂಡು ಹಣೆಗೆ, ಕಣ್ಣಿಗೆ, ಕಿವಿಗೆ, ಕೈಗೆ ಮುಂತಾದ ಕಡೆಗಳಲ್ಲಿ ವಿಭೂತಿಯನ್ನು ಬಳಿದುಕೊಂಡು ಬರುವ ಪುರವಂತ ಶಿವನ ಅವತಾರದಂತೆ ತೋರುವನು. ಅವನ ವೀರಾವೇಶ ದಕ್ಷಯಜ್ಞ ಧ್ವಂಸದ ಕಲ್ಪನೆಯನ್ನು ತಂದು ಕೊಡುತ್ತದೆ. ಅವರ ಮೌಖಿಕಪರಂಪರೆಯಲ್ಲಿ ಬರುವ ಒಡಬುಗಳು ವಿಶಿಷ್ಟ ರೀತಿಯ ಮಂತ್ರಪಠಣದಂತಿರುತ್ತವೆ. ಚಂಡಿ, ಚೌಡಿ, ಕಾಳಿ, ದುರ್ಗಿ, ದ್ಯಾಮವ್ವ, ಎಲ್ಲಮ್ಮ ಮುಂತಾದವರ ಉದ್ಗಾರ, ಯಜ್ಞ ಹಾಗೂ ಅಗ್ನಿಯ ಸಂಬಂಧಿಯಾದ ಒಡಬುಗಳು, ವಚನಗಳು ಆ ಸಂದರ್ಭದಲ್ಲಿ ಚಿತ್ತಾರಗೊಳ್ಳುತ್ತವೆ. ಸಾಂಕೇತಿಕವಾದ ಶಿವ, ನಂದಿ, ಬೃಂಗಿ, ವೀರಭದ್ರ, ಕಾಳಿ, ದುರ್ಗಿ, ದ್ರಾಕ್ಷಾಯಿಣಿ, ದಕ್ಷ, ಮುಂತಾದವರ ಪಾತ್ರಗಳು ಪೌರಾಣಿಕ ವಾತಾವರಣವನ್ನು ನಿರ್ಮಾಣ ಮಾಡುತ್ತಿವೆ".[2] ಈ ಪರಂಪರೆಯು ಕರ್ನಾಟಕದಲ್ಲಿ ಮಾತ್ರವಲ್ಲದೆ ಕರ್ನಾಟಕ–ಆಂಧ್ರ ಮತ್ತು ಕರ್ನಾಟಕ–ಮಹಾರಾಷ್ಟ್ರ ಗಡಿ ಭಾಗಗಳಲ್ಲಿ ಕೂಡ ಪ್ರಚಲಿತವಿದೆ. "ವೀರಭದ್ರನ ಪ್ರಮುಖ ಭಕ್ತರು ವೀರಶೈವರು ಅಂದರೆ ಪಂಚಮಸಾಲಿ ಪೀಠದವರು, ಸ್ವಾಮಿಗಳು, ಹಾಗೂ ಇತರ ಸಮುದಾಯದವರಾದ ಬ್ರಾಹ್ಮಣ, ಮರಾಠ, ಕುರುಬರು, ಜೈನರು ಮತ್ತು ಮುಸಲ್ಮಾನರು ಇದ್ದಾರೆ. ಕೆಲಕಡೆ ಕೆಳಸ್ಥರ ಜನರೂ ಇವನನ್ನು ಮನೆ ದೇವರೆಂದು ಭಾವಿಸುತ್ತಾರೆ. ಅಕ್ಕಸಾಲಿಗರು, ಕುಂಬಾರರು, ಕಂಬಾರರು, ಹಾಗೂ ಬಡಿಗರು ಬಹಳಷ್ಟು ಮಡಿ–ಹುಡಿಯಿಂದ ವೀರಭದ್ರನಿಗೆ ಸೇವೆ ಸಲ್ಲಿಸುತ್ತಾರೆ".[3]

ವೀರಭದ್ರನ ವಿಗ್ರಹಗಳಲ್ಲಿ ಶಿಲಾ ವಿಗ್ರಹವು ಹೆಚ್ಚಿನ ಸಂಖ್ಯೆಯಲ್ಲಿದ್ದು ಅದಕ್ಕೆ ಬೆಳ್ಳಿ, ಬಂಗಾರ, ಕಂಚು, ಹಿತ್ತಾಳೆ ಕವಚಗಳನ್ನು ರಚಿಸಲಾಗಿರುತ್ತದೆ. ಸಾಮಾನ್ಯವಾಗಿ ವೀರಭದ್ರನಿಗೆ ನಾಲ್ಕು ಕೈಗಳು ಇರುತ್ತವೆ. ಕೈಗಳಲ್ಲಿ ಖಡ್ಗ, ಬಿಲ್ಲು, ಬಾಣಗಳು ಮತ್ತು ಗದೆ, ಫಲಕ, ಕಂಡುಬರುತ್ತವೆ. "ದಕ್ಷ ಸಂಹಾರದ ಸಂದರ್ಭದಲ್ಲಿ ವೀರಭದ್ರನ ಸಹಾಯಕ್ಕೆ ದೇವಿ ದೇವತೆಗಳೆಲ್ಲರೂ ಬಂದಿರುವರು. ಭೂತ–ಪಿಶಾಚಿ ಮತ್ತು ರಾಕ್ಷಸರು ಕೂಡ ಭಾಗವಹಿಸುವ ಪೌರಾಣಿಕ ಕಲ್ಪನೆ ಇದೆ. ದಕ್ಷಯಜ್ಞದ ಧ್ವಂಸದ ಸಂದರ್ಭಗಳಲ್ಲಿ ದಕ್ಷನ ತಲೆಯೇ ಯಜ್ಞ ಕುಂಡಕ್ಕೆ ಆಹುತಿಯಾಗುತ್ತದೆ. ದಕ್ಷನ ಮೇಲೆ ದಂಡೆತ್ತಿ ಬಂದ ವೀರಭದ್ರನ–ಸೈನಿಕರಿಗೆ ದಕ್ಷನು ಕಾಣದಾಗಲು, ಅವನ ಸಮಸ್ತ ಸೈನ್ಯವೇ ಅಳಿದು ಹೋಗುವುದು. ರಣರಂಗದ ಆವೇಶಕ್ಕೆ ಗುರಿಯಾದ ಸೈನ್ಯ ಸಮೂಹ ದಕ್ಷ ಕಾಣದೆ ಇರುವುದರಿಂದ ತಮ್ಮ ಶಸ್ತ್ರಗಳಿಂದ ತಮ್ಮನ್ನೇ ತಾವು ಚುಚ್ಚಿಕೊಳ್ಳುವುದರ ಪ್ರತೀಕ ಶಸ್ತ್ರ ಪರಂಪರೆಯು ನಡೆದು ಬಂದಿರುವುದಾಗಿ ಐತಿಹ್ಯಗಳಿವೆ".[4] ಈಗಲೂ ಕೂಡ ವೀರಭದ್ರ ಪರಂಪರೆಯಲ್ಲಿ ಈ ಉಗ್ರ ಆಚರಣೆ ಸ್ಪಷ್ಟವಾಗಿ ಗೋಚರವಾಗುತ್ತಿದೆ.

ಗುಗ್ಗಳ ಪುರವಂತರ ಪರಂಪರೆ

ವೀರಭದ್ರ ಪರಂಪರೆಯಲ್ಲಿ 'ಗುಗಳ' ಪೂಜೆಗೆ ವಿಶೇಷ ಮಹತ್ವವಿದೆ. ಇದು ಉತ್ತರ ಕರ್ನಾಟಕದಲ್ಲಿ ವ್ಯಾಪಕವಾಗಿ ಕಂಡುಬರುವ ಧಾರ್ಮಿಕ ಆಚರಣೆಯಾಗಿದೆ. ಜೊತೆಗೆ ಕರ್ನಾಟಕದೊಂದಿಗೆ ಗಡಿ ಹಂಚಿಕೊಂಡಿರುವ ಆಂಧ್ರ, ತೆಲಂಗಾಣ, ಮಹಾರಾಷ್ಟ್ರ ಗಡಿಭಾಗದಲ್ಲಿ ಪ್ರಚಲಿತವಾಗಿದ್ದು ವೈಶಿಷ್ಟ್ಯಪೂರ್ಣವಾಗಿದೆ. ಈ ಆಚರಣೆಯು ವೀರಶೈವರಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಜೊತೆಗೆ "ಒಟ್ಟು ಹಿಂದೂ ಸಮಾಜಕ್ಕೆ ಅಂಟಿಕೊಂಡಿರುವ ಧಾರ್ಮಿಕ ಸಂಪ್ರದಾಯವಾಗಿದೆ".[5] ವೀರಭದ್ರನ ಆರಾಧಕರು, ವೀರಶೈವ ಲಿಂಗಾಯತರ ಮದುವೆ, ವೀರಭದ್ರನ ಜಾತ್ರೆ ಮತ್ತು ಉತ್ಸವ ಹಾಗೂ ಶುಭ ಪ್ರಸಂಗಗಳಲ್ಲಿ ಪುರವಂತರ ಗುಗ್ಗಳಕಾರ್ಯ ನಡೆಯುತ್ತದೆ. "ದಕ್ಷಯಜ್ಞನ ಕಥೆಯು ಮಹಾಭಾರತ ಹಾಗೂ ಪುರಾಣಗಳಲ್ಲಿ ವ್ಯಾಪಕವಾಗಿ ವರ್ಣಿಸಲಾಗಿದೆ. ಆದರೆ ಗುಗ್ಗಳದ ವಿಶೇಷ ಪರಂಪರೆಯ ವಿಷಯ ಎಲ್ಲಿಯೂ ಕಂಡುಬರುವುದಿಲ್ಲ. 12ನೇ ಶತಮಾನದ ತರುವಾಯವೇ ಈ ಆಚರಣೆ ಹೆಚ್ಚು ಪ್ರಚಲಿತಕ್ಕೆ ಬಂದಿರಬಹುದು ನಂತರ ಲಕ್ಕಣ್ಣ ದಂಡೇಶನು ಗುಗ್ಗಳ–ಧೂಪಗಳ ಉಲ್ಲೇಖ ಮಾಡಿರುವನು".[6]

ಗುಗ್ಗಳ ಪೂಜೆ

ಗುಗ್ಗಳ ಧೂಪ ಅಥವಾ ಊದಿನಕಡ್ಡಿ ಕುಲಕ್ಕೆ ಸೇರಿದ ಒಂದು ಮರದಿಂದ ಬರಬಹುದಾದ ಪದಾರ್ಥ, ಗಂಧದ ಪುಡಿ, ದಶಾಂಗ ಅಂದರೆ ಹತ್ತು ಸುಗಂಧ ಮಿಶ್ರ ವಸ್ತುಗಳನ್ನು ಒಳಗೊಂಡ ವಸ್ತು. ಈ ವಸ್ತುವನ್ನು ಬೆಂಕಿಯಲ್ಲಿ ಹಾಕುವುದರಿಂದ ಸುವಾಸನೆಯುಕ್ತವಾದ ಹೊಗೆಯು ಹೊರವಮ್ಮುತ್ತದೆ. ಇದರ ಜೊತೆಗೆ ಕುಂಬಾರ ಮಾಡಿದ ಮಣ್ಣಿನ ಕೊಡ, ಬಡಿಗ ಮಾಡಿದ ಸೆಕ್ಕೆಯನ್ನು ಕೊಡಕ್ಕೆ ಕಟ್ಟಿ ತಮಗೆ ಬೇಕಾದ ಆಕೃತಿಯಲ್ಲಿ ರಚನೆ ಮಾಡುವರು. ಗಾಣಿಗ ಎಣ್ಣೆಯನ್ನು ಮತ್ತು ಹತ್ತಿಕಾಳುಯುಕ್ತ ದೂಪದ ಗುಗ್ಗಳ ತಯಾರಿಸುತ್ತಾರೆ ಹಾಗೂ ವೀರಶೈವ ಸಮುದಾಯದವರು ಆರಾಧನೆ ಮಾಡುತ್ತಾರೆ. ಈ ಎಲ್ಲಾ ಸಮುದಾಯದವರು ಕೂಡಿಕೊಂಡು ಗುಗ್ಗಳವನ್ನು ತಯಾರಿಸುತ್ತಾರೆ.

"ಗುಗ್ಗಳ ಪೂಜೆ ವಿಶೇಷವಾಗಿ ಪುರುಷ ದೇವರುಗಳಿಗೆ ನಡೆಯುವ ಸೇವೆ, ದೂಪ ಮುಂತಾದ ವಿಶಿಷ್ಟ ರೀತಿಯ ಒಗೆಯನ್ನು ಅರ್ಪಿಸಿ, ದೈವಗಳನ್ನು ಆಹ್ವಾನಿಸುವ ರಹಸ್ಯ ಹೆಚ್ಚಿನ ಮತಗಳಲ್ಲಿ ಪ್ರಚಾರವಾಗಿದೆ. ಈ ಗುಗ್ಗಳದ ಸನ್ನಿವೇಶದಲ್ಲಿ ಪುರವಂತರು ಆವೇಶಭರಿತರಾಗಲು, ಗುಗ್ಗಳದ ಹೊಗೆಯು ಮಹತ್ವದ ಪಾತ್ರ ವಹಿಸುತ್ತಿರಬೇಕು. ಜೊತೆಯಲ್ಲಿ ಹೆಚ್ಚು ಭಾವನಾತ್ಮಕವಾಗಿರುವ ಕರಡಿ–ಮಜ್ಜಲು, ಸಂಬಾಳದ ಧ್ವನಿಗಳು ಪುರವಂತರ ಆರ್ಭಟಕ್ಕೆ ಪೂರಕವಾಗಿರುವಂತಿದೆ".[7] ಗುಗ್ಗಳವನ್ನು ಪುರವಂತರು ನಡೆಸಿಕೊಡುವ ಪದ್ಧತಿಯನ್ನು ಜಾತ್ರೆ, ಮದುವೆ, ಉತ್ಸವ, ಸಂದರ್ಭದಲ್ಲಿ ಕಂಡುಬರುತ್ತವೆ. ಈ ಗುಗ್ಗಳ ಕಾರ್ಯ ನಡೆಸುವ ಪುರವಂತರ ಲಕ್ಷಣಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

"ಆರ್ಯ–ದ್ರಾವಿಡ ಸಂಘರ್ಷದಲ್ಲೇ ಸಮನ್ವಯ ಮೂರ್ತಿಯಾಗಿ ಹುಟ್ಟಿ ಬಂದ ವೀರಭದ್ರ ಪರಂಪರೆ ಇನ್ನೂ ಜೀವಂತವಾಗಿದೆ. ದುಷ್ಟರ ಸಂಹಾರ, ಶಿಷ್ಟರ ಸಂರಕ್ಷಣೆಯೇ ವೀರಭದ್ರನ ಮಡಿವಂತಿಕೆ. ಉತ್ತರ ಕರ್ನಾಟಕದಲ್ಲಿ ವಿಶ್ವಕರ್ಮ ಸಮಾಜದ ಪುರವಂತರೆ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಕಾಣುತ್ತೇವೆ. ಇವರನ್ನು ಕಾಳಿಕಾದೇವಿ ಮತ್ತು ವೀರಭದ್ರನ ಕಾಯಕದವರೆಂದು, ಕಾಶಿಲಿಂಗದ ವೀರರೆಂದು ವರ್ಣಿಸಲಾಗಿದೆ".[8] ಇವರ ಕೊರಳಲ್ಲಿ ಮೂವತ್ತೆರಡು ಲಿಂಗಗಳ ಸರಮಾಲೆ, ನಾಲ್ಕು ರುದ್ರಾಕ್ಷಿ ಮಾಲೆ,

ಕೈಯಲ್ಲಿ ಝಳಪಿಸುವ ಖಡ್ಗ, ದಕ್ಷ ಬ್ರಹ್ಮನ ಹೋಳಾದ ಶಿರೋಮಾಲೆ ಹಾಗೂ ಕಿರುಗಂಟೆಗಳನ್ನು ಕಟ್ಟಿದ ಪುರವಂತರು ವೇಷದಿಂದ ಅವರು ಆಶ್ಚರ್ಯಗೊಳ್ಳುವ ರೀತಿಯಲ್ಲಿ ಕಂಡು ಬರುತ್ತಾರೆ

ಪುರವಂತರು ಗುಗ್ಗಳ ಆಚರಣೆ ವಿಧಾನಗಳು

ಈ ಪುರವಂತರ ಗುಗ್ಗಳ ಸೇವಾ ಕಾರ್ಯವು ಪೌರಾಣಿಕ ಹಿನ್ನಲೆಯನ್ನು ಒಳಗೊಂಡಿದೆ. ದಕ್ಷಬ್ರಹ್ಮನಿಂದ ಅವಮಾನಕ್ಕೆ ಒಳಗಾದ ಪಾರ್ವತಿಯ ಪತಿಯಾದ ಶಿವನು ರುದ್ರನರ್ತನ ಮಾಡಿ ತನ್ನ ಜಟಾಯುದಿಂದ ಕೂದಲು ಕಿತ್ತಿ ಬೀಳುತ್ತದೆ ಆ ಕೂದಲೇ ವೀರಭದ್ರ ದೇವನಾಗುತ್ತಾನೆ. ನಂತರ ವೀರಭದ್ರ ದಕ್ಷಬ್ರಹ್ಮನ ರುಂಡವನ್ನು ಕಡೆದು, ಮೇಕೆಯರುಂಡವನ್ನು ಇಡುವನು. ನಂತರ ಕಾಳಿಯು ವೀರಭದ್ರನ ರೌದ್ರಾವತಾರ ಕಡಿಮೆಯಾಗಲು ಕೇಳಿಕೊಂಡಾಗ, ನಡೆದಿರುವ ಅಗ್ನಿ ಜೇಷ್ಠತೆಯನ್ನು ಕಂಡು ವೀರಭದ್ರನ ರೌದ್ರತೆ ಕಡಿಮೆಯಾಗುವುದು. ಹೀಗೆ ಅಗ್ನಿಯನ್ನು(ಗುಗ್ಗಳ) ತೆಗೆದುಕೊಂಡು ಕುಣಿಯುವ ಪುರವಂತರು ವೀರಭದ್ರನನ್ನು ಸಂತೋಷಪಡಿಸುವುದೇ ಅವರ ಉದ್ದೇಶವಾಗಿರುತ್ತದೆ.

ಗುಗ್ಗಳ ಪೂಜೆಯ ಸಂದರ್ಭ:

ಇಂತಹ ಪೂಜೆಗಳಿಂದ ಸಂತುಷ್ಟವಾದ ವೀರಭದ್ರ ತಮಗೆ ಆಶೀರ್ವದಿಸುವನು ಎಂಬ ನಂಬಿಕೆ ಜನರಲ್ಲಿ ಬೇರೂರಿದೆ. ವೀರಭದ್ರನ ಆರಾಧಕರು ಮನೆಯಲ್ಲಿ ಶುಭಸಂದರ್ಭದಲ್ಲಿ, ವಿವಾಹ ಮತ್ತು ತಮ್ಮ ಇಷ್ಟಕಾರ್ಯ ಸಾಧನೆಗಾಗಿ ಹಾಗೂ ವೀರಭದ್ರನ ಉತ್ಸವ ಜಾತ್ರೆಯಲ್ಲಿಯೂ ಗುಗ್ಗಳ ಪೂಜೆ ನಡೆಯುವುದು. "ವೀರಶೈವರಲ್ಲಿ ವೀರಭದ್ರನ ಭಕ್ತರಾದವರು ಗುಗ್ಗಳ ಕಾರ್ಯ ಮುಗಿಯುವವರೆಗೂ ಮದುವೆಯಾಗುವುದಿಲ್ಲ".[9] ರವಿಗುಗ್ಗಳ ದೇವಸ್ಥಾನಗಳಲ್ಲಿ ನಿರ್ದಿಷ್ಟ ನಿಯಮಗಳ ಪ್ರಕಾರ ಗಂಭೀರ ಸ್ವರೂಪದಲ್ಲಿ ನಡೆದರೆ, ಸಾಮಾನ್ಯ ಗುಗ್ಗಳದಲ್ಲಿ, ಗುಗ್ಗಳ ಹೊರುವ ವ್ಯಕ್ತಿಗಳು ಹಂದರಗಂಬವನ್ನು ತಂದ ದಿನ ಸೂರ್ಯಸ್ತದ ನಂತರ ಉಪವಾಸ ಕೈಗೊಳ್ಳಬೇಕು. "ಗುಗ್ಗಳವನ್ನು ಹೊರಡಿಸುವವರು, ಒಬ್ಬ ವ್ಯಕ್ತಿಗೆ ಒಂದು ಕೊಡ, ಎರಡು ಕೂಡ, ಕೆಲ ಸಂದರ್ಭದಲ್ಲಿ ಬೇಡಿಕೆಗೆ ತಕ್ಕಂತೆ ಕೊಡಗಳ ಸಂಖ್ಯೆ ಹೆಚ್ಚಿಸುತ್ತಾರೆ. ಗುಗ್ಗಳ ಹೊರುವವರ ಜೊತೆಯಲ್ಲಿ ಗುಗ್ಗಳದಲ್ಲಿ ಕೂಡುವವರು ತಾಯಿಯೇ ಆಗಿರಬೇಕು, ಅವರು ಮುತ್ತೈದೆ ಆಗಿರಬೇಕೆಂಬ ನಿಯಮವಿಲ್ಲ. ತಾಯಿ ಇಲ್ಲದಿದ್ದರೆ ಅಕ್ಕ, ತಂಗಿ, ಅಣ್ಣನ ಹೆಂಡತಿ, ಕೂಡಬಹುದು".[10] ಹೀಗೆ ಗುಗ್ಗಳದಲ್ಲಿ ಕೂಡುವವರಿಗೆ ಉಪವಾಸದ ನಿಯಮ ಅನ್ವಯಿಸುವುದು. ಈ ಸಮಯದಲ್ಲಿ ಋತುಮತಿ ಹೆಣ್ಣುಮಕ್ಕಳು ಇರಕೂಡದು ಎಂಬ ನಿಯಮವಿದೆ. ಗುಗ್ಗಳ ಹೊರುವವರು ಅಂದು ಮುಂಜಾನೆ ಹಾಲು–ಮೊಸರು ಮತ್ತು ಎಣ್ಣೆ ಹಚ್ಚಿ ತಲೆಸ್ನಾನ ಮಾಡಬೇಕು. ಗುಗ್ಗಳ ಮುಗಿದ ಮೇಲೆ ಮೊಸರನ್ನ ಊಟಮಾಡಬೇಕು.

ಗುಗ್ಗಳ ಕೊಡವನ್ನು ಸಿದ್ಧಪಡಿಸುವುದು, ಗುಗ್ಗಳ ಕಾರ್ಯ ಮಾಡುವವರು ಕುಂಬಾರ ಮತ್ತು ಪುರವಂತರ ಮನೆಗೆ ಹೋಗಿ ವೀಳ್ಯದೆಲೆ ಕೊಟ್ಟು ಬರಮಾಡಿಕೊಳ್ಳಬೇಕು. ನಂತರ ಸಾಂಬಾಳ ಜೊತೆಗೆ ಊರ ದೇವಾಲಯಗಳಿಗೆ ಹೋಗಿ ಎಣ್ಣೆ ಎರೆಯಬೇಕು. ನಂತರ ಗುಗ್ಗಳ ಕೊಡವನ್ನು ದೇವಾಲಯದಲ್ಲಿ ಅಥವಾ ಗುಗ್ಗಳ ನಡೆಸುವವರ ಮನೆಯಲ್ಲಿ ಕಂಬಳಿಯ ಮೇಲೆ ಗುಗ್ಗಳ ತಯಾರಿಸಿಕೊಳ್ಳುವರು. ಬಡಿಗನು ಸೆಕ್ಕೆಗಳಿಂದ ಗೂಡು ಕಟ್ಟುವನು, ಗೋಧಿಯ ಹಿಟ್ಟಿನ ಕಣಕವನ್ನು ತುಂಬುವನು. ಮಧ್ಯದಲ್ಲಿ ಬಟ್ಟೆಯ ಸಿಂಬೆ ಸಿಕ್ಕಿಸುವನು. ಅದರ ಸುತ್ತಲು ಹತ್ತಿಕಾಳು, ಕೊಬ್ಬರಿಚೂರು, ಶ್ರೀಗಂಧ ಪುಡಿ, ಗುಗ್ಗಳ ಹಾಗೂ ಗಂಧದ

ಪುಡಿಗಳನ್ನು ಹಾಕುವರು. ಮಧ್ಯದಲ್ಲಿರುವ ಬಟ್ಟೆಗೆ ದೀಪದ ಎಣ್ಣೆಯಲ್ಲಿಯೇ ಎದ್ದಿ ಉರಿಸಲು ಹಣಿಮಾಡುವರು. ಗುಗ್ಗಳ ಎಬ್ಬಿಸುವುದು ಎಂದರೆ ಪೂಜೆಗೊಳಿಸಿದ ಕೊಡಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಗುಗ್ಗಳ ಎಬ್ಬಿಸುವುದು ಎನ್ನುವರು. ಹಪ್ಪಳ, ಹೋಳಿಗೆ, ಮಿರ್ಚಿ, ಒಂಬತ್ತು ಪದಾರ್ಥಗಳಿಂದ ಉಡಿ ತುಂಬುವುದು. ತಯಾರಾದ ಗುಗ್ಗಳದ ಕೊಡಗಳು ಹೊರ ಬರುತ್ತಲೇ ಹರಕೆ ಹೊತ್ತವರನ್ನು ಪೂರ್ವ ಇಲ್ಲವೆ ಉತ್ತರಾಭಿಮುಖವಾಗಿ ನಿಲ್ಲಿಸಿ ಪುರವಂತರು ಶಸ್ತ್ರವನ್ನು ಚುಚ್ಚುವರು. ಗುಗ್ಗಳ ಹೊರುವರಿಗೆ ಏನಾದರೂ ತೊಂದರೆಯಾದರೆ ಅದನ್ನು ಪುರವಂತರು ನೋಡಿಕೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ. ಆ ಸಂದರ್ಭದಲ್ಲಿ ಗುಗ್ಗಳ ಹೊತ್ತವರು ಹೇಳುವ ಹರಕೆಯ ವಿಷಯವನ್ನು ಕೇಳಿ ಅದಕ್ಕೆ ಪರಿಹಾರ ಸೂಚಿಸಿ ಲಿಂಬೆಹಣ್ಣು ಕತ್ತರಿಸಿ ನಿವಾಳಿಸಿ ತೆಗೆದು ಚೆಲ್ಲುವರು.

ಗುಗ್ಗಳ ಹೊರುವರು ಮದುಮಕ್ಕಳು ಗುಗ್ಗಳ ಕೊಡದ ಜೊತೆಯಲ್ಲಿ ಬರುವುದಕ್ಕೆ ಗುಗ್ಗಳ ಹೊರುವುದು ಎನ್ನುವರು. ಇದು ವೀರಭದ್ರನಿಗೆ ಸಲ್ಲಿಸುವ ಹರಕೆ ಅಥವಾ ಸೇವೆ. ಮದುಮಕ್ಕಳು ಉಪವಾಸ, ಮಡಿಸ್ನಾನ, ಗಂಡಸರು ಲಿಂಗವನ್ನು ಕೆಂಪು ಬಟ್ಟೆಯಲ್ಲಿ ಕೊರಳಲ್ಲಿ ಕಟ್ಟಿಕೊಂಡು, ಹೊಸ ಧೋತರವನ್ನು ಹುಟ್ಟು ಬರಿಮೈಯಿಂದ ಇರುವರು. "ಕೊರಳಲ್ಲಿ ಬಿಳಿ ಕಣಗಿಲ ಹೂವಿನ ಹಾರವಿರಬೇಕು ಎಂಬ ನಿಯಮವಿದೆ. ಹೆಣ್ಣುಮಕ್ಕಳು ಹಸಿರುಸೀರೆ, ಕಣಗಿಲೆ ಹೂವಿನ ದಂಡೆ, ಕೊರಳಲ್ಲಿ ಲಿಂಗವಿರುವುದು".[11] ಗುಗ್ಗಳ ಉತ್ಸವ ಪ್ರಾದೇಶಿಕವಾಗಿ ಭಿನ್ನವಾಗಿರುತ್ತವೆ. ಬಿಳಿಯ ಧೋತ್ರ, ಅಂಗಿ ಹಾಕಿರುವರು. ಕರಡಿಮಜ್ಜಲು, ಸಂಬಾಳ, ಸನಾದಿ, ಕೊಂಬು–ಕಹಳೆ ಈ ವಾದ್ಯಗಳೊಂದಿಗೆ ಗುಗ್ಗಳ ಉತ್ಸವ ದೇವಾಲಯಗಳಿಗೆ ತೆರಳುವ ಮುಖಾಂತರ ವಿಜೃಂಭಣೆಯಿಂದ ಸಾಗುವುದು. ಗುಗ್ಗಳ ಮನ್ನಿಸು ಎಂದರೆ ಎಲ್ಲಾ ದೇವಾಲಯಗಳಿಗೆ ಹೋಗಿ ಕೊನೆಗೆ ಊರಿನ ಅಗಸಿಯನ್ನು ದಾಟಿ ಬರುವರು ಅಲ್ಲಿ ಕಂಬಳಿಯಾಸಿ, ಜಂಗಮನಿಗೆ ಎಲೆ, ಅಡಿಕೆ, ಕೆಂಪುವಸ್ತ್ರವನ್ನು ಕೊಟ್ಟು ಗುಗ್ಗಳಕ್ಕೆ ರಾಳವನ್ನು ಮತ್ತು ಹಾಲು, ಮೊಸರು, ತುಪ್ಪಗಳನ್ನು, ನೈವೇದ್ಯವನ್ನು ಅರ್ಪಿಸಿ, ನಂದಿಸುವರು. ಇದನ್ನೇ ಗುಗ್ಗಳ ಮನ್ನಿಸು ಎಂದು ಕರೆಯುತ್ತಾರೆ.

"ಪುರವಂತರ ದೀಕ್ಷೆಯು ವೀರಭದ್ರನ ಭಕ್ತರಾಗಿರುವ ಯಾರು ಸಹ ಪುರವಂತನಾಗಬಹುದು. ಜಾತಿ ಅಡ್ಡಿಯಾಗಲಾರದು. ಬರುವಂತನಾಗುವ ವ್ಯಕ್ತಿ ಅಂಗವಿಕಲನಾಗಿರಬಾರದು. ದೀಕ್ಷೆ ಪಡೆಯುವವರು ವಿವಾಹ ಪೂರ್ವದಲ್ಲಿಯೇ ದೀಕ್ಷೆ ಪಡೆದಿರಬೇಕು. ಪಂಚ ಕಳಸಗಳ ಸೂತ್ರವನ್ನು ದೀಕ್ಷೆ ಪಡೆದುಕೊಳ್ಳುವನ ಕೈಯಲ್ಲಿಡುವರು. ಅದರ ಮೇಲೆ ಗುರು ತನ್ನ ಕೈಯನ್ನಿಟ್ಟು ಗುರುದೀಕ್ಷೆಯನ್ನು ಕೊಡುವನು".[12] ಪುರವಂತರ ವೇಷ ಭೂಷಣಗಳು ಜಾನಪದ, ಧಾರ್ಮಿಕ ಕಲಾಸಂಪ್ರದಾಯದಲ್ಲಿ ಪುರವಂತರು ವಿಶಿಷ್ಟ ಸ್ಥಾನ ಪಡೆದಿರುವರು. ಕಾವಿ ಬಣ್ಣದ ಧೋತರ, ಕಾವಿಅಂಗಿ ಧರಿಸಿ ನಡಕ್ಕೆ ನಡಪಟ್ಟಿ ಕಟ್ಟಿರುವರು. ಮೈಮೇಲೆ ಸುಂದರವಾದ, ಗಲೇಪದಂತಹ ವಸ್ತ್ರ ಹಾಕಿರುವರು. ತಲೆಗೆ ಕಾವಿಯ ಅಥವಾ ಹಸಿರು ರೇಷ್ಮೆ ರುಮಾಲು, ತೋಳಗಳಿಗೆ ಬೆಳ್ಳಿಯ ನಾಗರಗಳು, ಎದೆಗೆ ವೀರಭದ್ರನ ಮೂರ್ತಿ ಇರುವುದು. ನಡಕ್ಕೆ ರುಂಡ ಮಾಲೆಗಳು ಇಲ್ಲವೆ ನರಸಿಂಹನ ಮುಖ ಇರುತ್ತದೆ. ಕೈಮಣಿಕಟ್ಟಿಗೆ ಹಾಗೂ ಕೊರಳಿಗೆ ರುದ್ರಾಕ್ಷಿಗಳಿರುತ್ತವೆ. ಕಿವಿಯಲ್ಲಿ ರುದ್ರಾಕ್ಷಿ ಹಾಕಿಕೊಂಡು ಬಲಗೈಯಲ್ಲಿ ಸಣ್ಣ ರಕ್ಷಾಜೋಳಿಗೆ, ಹಣೆಯಲ್ಲಿ ವಿಭೂತಿ ಹೀಗೆ ಪುರವಂತರ ವೇಷಭೂಷಣಗಳು ಆಕರ್ಷಕವಾಗಿರುತ್ತವೆ ಈ ಎಲ್ಲಾ ವೇಷ–ಭೂಷಣಗಳಿಂದ ಪುರವಂತರ ಪರಂಪರೆ ಧಾರ್ಮಿಕ ಚೌಕಟ್ಟಿದ್ದರು ಸಹ ಕಲಾತ್ಮಕ ರೀತಿಯಲ್ಲಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ.

"ಶಸ್ತ್ರಗಳು ವಿವಿಧ ಪ್ರಕಾರಗಳಲ್ಲಿ ಗೋಚರವಾದರು ಸಹ ಬಹುತೇಕ ಒಂದೇ ಪ್ರಕಾರದ ಶಸ್ತ್ರವನ್ನು ಕಾಣುತ್ತೇವೆ. ಮೈಲಾರಲಿಂಗ, ವೀರಭದ್ರ, ಕಾಳಮ್ಮ, ಚಿಂಚಲಿ ಮಾಯವ್ವ ದೇವಾಲಯಗಳಲ್ಲಿಯೂ ಕಂಡುಬರುತ್ತದೆ".[13] ಬಲಗೈಯಲ್ಲಿ ಖಡ್ಗ ಅಥವಾ ತ್ರಿಶೂಲ, ಎಡಗೈಯಲ್ಲಿ ಲಿಂಬೆಯ ಹಣ್ಣು ಚುಚ್ಚಿದ ಶಸ್ತ್ರ ಇರುತ್ತದೆ. ಶಸ್ತ್ರಗಳಲ್ಲಿ ಉದ್ದ ಹಾಗೂ ಅಳತೆಯಲ್ಲಿ ಭಿನ್ನವಾಗಿದ್ದು, ಬೆಳ್ಳಿ, ಕಂಚು, ಹಿತ್ತಾಳೆ, ಉಕ್ಕು, ಪಂಚಲೋಹದಿಂದ ಮಾಡಿರುವರು. ಇವುಗಳನ್ನು ನಾಲಿಗೆ, ತುಟಿ, ಹೊಟ್ಟೆ, ಕಣ್ಣಿನ ರೆಪ್ಪೆ, ಕೈಮೀನಗಂಡ, ಗಲ್ಲದಮೇಲೆ ಶಸ್ತ್ರಹಾಕುವರು ಮತ್ತು ದಕ್ಷಯಜ್ಞನ ಸಂಹಾರದ ಸಂದರ್ಭವನ್ನು ಅಭಿನಯಿಸುವ ಮೂಲಕ ತೋರಿಸುತ್ತಾರೆ. ಗಂಟು ಹಾಕಿದ ನೂಲಿನ ದಾರದ ಶಸ್ತ್ರ ಮತ್ತು ಕೆಲ ಕಡೆಗಳಲ್ಲಿ ಗುಪ್ತ ಶಸ್ತ್ರವು ನಾಲ್ಕು ಜನ ಏಣಿಯ ಸಹಾಯದಿಂದ ಒಂದೇ ಶಸ್ತ್ರ ಸಲಾಕೆಯನ್ನು ಹಾಕಿಕೊಳ್ಳುವ ಪವಾಡ ಕಂಡು ಬರುತ್ತದೆ.

ಪುರವಂತರಿಗೆ ಕೆಲ ವಿಧಿ–ನಿಷೇಧಗಳಿರುತ್ತವೆ ಪುರವಂತ ದೀಕ್ಷೆ ನಂತರ ಸತ್ಯವನ್ನು ಹೇಳಬೇಕು, ಏಕಪತ್ನಿವ್ರತಸ್ಥನಾಗಿರಬೇಕು. ಲಿಂಗ, ರುದ್ರಪೂಜೆಯನ್ನು ಮಾಡುತ್ತಿರಬೇಕು. ಜಂಗಮ ಸೇವೆಯನ್ನು ಮಾಡಬೇಕು. ವೀರಭದ್ರನ ಸ್ತುತಿ ಮಾಡಬೇಕು. ಒಡಬು–ವಚನಗಳನ್ನು ಹೇಳಬೇಕು. ಊರಲ್ಲಿ ಯಾರಾದರೂ ತೀರಿಕೊಂಡ ವಿಷಯ ತಿಳಿದ ಮೇಲೆ ಶವಸಂಸ್ಕಾರ ಆಗುವವರಿಗೆ ಊಟ ಮಾಡಬಾರದು. ಹೆಂಡತಿ ಮುಟ್ಟಾದರೆ ಮೂರುದಿನ ದೂರಇರಬೇಕು. ಪೂರ್ವದಿಕ್ಕಿಗೆ ಮೂತ್ರ ವಿಸರ್ಜನೆ ಮಾಡಬಾರದು. ರಾತ್ರಿಊಟ ಮಾಡುತ್ತಿರುವಾಗ ದೀಪವು ನಂದಿಹೋದರೆ ಮರುದಿನ ಸೂರ್ಯೋದಯವರೆಗೆ ಊಟ ಮಾಡಬಾರದು. ಪುರವಂತಿಕೆಯಲ್ಲಿ ರುದ್ರಕಾಶಿ, ವಿಷ್ಣುಕಾಶಿ, ಬ್ರಹ್ಮಕಾಶಿ ಹಾಗೂ ಮಟ್ಟದ ಪುರವಂತರು ಮತ್ತು ಕಟ್ಟಿಮನಿ ಪುರವಂತರುಗಳು ಕಂಡುಬರುತ್ತಾರೆ.

ಗುಗ್ಗಳ ಪುರವಂತರು ಮತ್ತು ಕಾಳಮ್ಮ

ಗುಗ್ಗಳವು ಪುರುಷ ದೇವರಿಗೆ ನಡೆಯುವ ಆಚರಣೆಯಾದರೂ ಸಹ, ಗುಗ್ಗಳವನ್ನು ಆಚರಿಸುವ ಸಂದರ್ಭದಲ್ಲಿ ಗ್ರಾಮದ ದೇವರುಗಳಿಗೆ ಹೋಗುವಾಗ, ವಿಶೇಷವಾಗಿ ಶಿರಸಂಗಿ ಕಾಳಮ್ಮನ ದೇವಸ್ಥಾನದಲ್ಲಿ, ವಿಶ್ವಕರ್ಮ ಪುರವಂತರು ಗುಗ್ಗಳದ ಕಾರ್ಯ ಪೂರ್ಣಗೊಂಡ ಮೇಲೆ ಕಾಳಮ್ಮನ ದೇವಾಲಯದ ಮೇಲೆ ಗುಗ್ಗಳವನ್ನು ಇಡುತ್ತಾರೆ. ವೀರಭದ್ರನಿಗೆ ಗುಗ್ಗಳ ಸೇವಾ ನಡೆದರು ಕಾಳಮ್ಮನ ದೇವಾಲಯದಲ್ಲಿ ಪುರುವಂತರ ಕುಣಿತ, ಒಡಬು–ವಚನಗಳ ಹಾಡುವ, ಮತ್ತು ಶಸ್ತ್ರಕಾರ್ಯವು ನಡೆಯುತ್ತದೆ. ವಿಶೇಷ ಸಂದರ್ಭದಲ್ಲಿ ಹಾಗು ಕಡೆ ಪಂಚಮಿಯ ಸಂದರ್ಭದಲ್ಲಿ ಪುರವಂತರ ಕುಣಿತ, ಒಡಬು–ವಚನ ಹಾಡುವ ಮತ್ತು ಶಸ್ತ್ರಕಾರ್ಯ ನಡೆಯುತ್ತದೆ. ಪುರವಂತರು ಪಂಚಲೋಹದ ಸಲಾಕೆಯ ಶಸ್ತ್ರಪವಾಡ ಜರುಗುತ್ತದೆ. ಬೃಹತ್ತಾಕಾರದ ಲೋಹದ ಸಲಾಕೆಯನ್ನು ಮುಂಗೈ ಮಣಿಕಟ್ಟು ಸ್ಥಳದಲ್ಲಿ, ಕಣ್ಣರಪ್ಪೆ, ಕೈಮೀನಗಂಡ, ನಾಲಿಗೆ, ತುಟಿಗಳಿಗೆ ಶಸ್ತ್ರಹಾಕಿಕೊಂಡ ರಮಣೀಯ, ಭಾವಪರವಶವಾದ ಪವಾಡದ ಸಂದರ್ಭವನ್ನು ಕಾಣುತ್ತೇವೆ. ಪುರವಂತರಿಗೆ ಸಂಬಾಳದವರು ಡೋಲು, ಶೃತಿ, ಶನಾಹಿ, ವಾದ್ಯಗಳಿಂದ ಸಾತ್ ಕೊಡುತ್ತಾರೆ. ಈ ಸಂದರ್ಭದಲ್ಲಿ ಪುರವಂತರ ವೀರಭದ್ರನ ಮತ್ತು ಕಾಳಿಕಾದೇವಿಯ ಒಡಬುಗಳನ್ನು ಹೇಳುತ್ತಾರೆ, ವಚನಗಳನ್ನು ಹಾಡುವುದು ಕಂಡುಬರುತ್ತದೆ.

"ಶಿರಸಂಗಿಯ ಕಾಳಮ್ಮನಿಗೆ ಮತ್ತು ಗೊಡಚಿಯ ವೀರಭದ್ರನಿಗೂ ತೀರ ಬಾಂಧವ್ಯವಿದೆ. ಶಿರಸಂಗಿಯ ಕಾಳಮ್ಮ ಬರುವವರೆಗೆ ವೀರಭದ್ರನ ಜಾತ್ರೆಯಲ್ಲಿ ತೇರು ಎಳೆಯಲಾರದು. ಈ ತೇರನ್ನು ಎಳೆಯುವವಳೆ

ಕಾಳಮ್ಮ. ಹಾಗೂ ವೀರಭದ್ರದೇವರ ಜಾತ್ರೆ, ರಥೋತ್ಸವ ಮುನ್ನ ದಿನವೇ ವೀರಭದ್ರನ ಪಲ್ಲಕ್ಕಿಯು ಶಿರಸಂಗಿಗೆ ಹೋಗುವುದು. ಮರುದಿನ ಅವಳನ್ನು ಜೊತೆಮಾಡಿ ಪಲ್ಲಕ್ಕಿಯು ಗೊಡಚಿಗೆ ಬರುವುದು. ವೀರಭದ್ರನ ಉತ್ಸವ ಮೂರ್ತಿಯು ರಥವನ್ನು ಏರಿದ ನಂತರ ಕಾಳಮ್ಮನೆ ರಥವನ್ನು ಎಳೆಸುವಳು ಎಂಬ ನಂಬಿಕೆ ಇಲ್ಲಿಯ ಜನರಲ್ಲಿ ಮನೆ ಮಾಡಿದೆ".[14] ಅಲ್ಲದೆ ಇದೇ ತರನಾದ ಸವದತ್ತಿಯ ಎಲ್ಲಮ್ಮ ಸಹ ಗೊಡಚಿಯ ಜಾತ್ರೆಗೆ ಬರುತ್ತಿದ್ದಳಂತೆ, ಆದರೆ ಈಗ ಎಲ್ಲಮ್ಮ ಗೋಡಚಿಗೆ ಬರಲಾರದೆ ತನ್ನ ಕೈ ಹಾಗೂ ನಂದಿ ಕೋಲುಗಳನ್ನು ಮಾತ್ರ ಕಳುಹಿಸುತ್ತಿರುವಳು. ಹೀಗೆ ವೀರಭದ್ರ ದೇವರು ಶಿರಸಂಗಿ ಕಾಳಮ್ಮ ಮತ್ತು ಎಲ್ಲಮ್ಮ ಸಹೋದರ ಸಂಬಂಧವನ್ನು ಹೊಂದಿರುವುದು ಆಯಾ ಕ್ಷೇತ್ರದಲ್ಲಿ ನಡೆಯುವ ಜಾತ್ರೆ ಮತ್ತು ಉತ್ಸವಗಳಲ್ಲಿ ಕಂಡುಬರುತ್ತದೆ.

ಒಂದು ಸಾರಿ ಎಲ್ಲಮ್ಮ ಗೊಡಚಿಗೆ ಬರಲು ತಡವಾಯಿತು. ಆ ಸಂದರ್ಭದಲ್ಲಿ ಶಿರಸಂಗಿಯ ಕಾಳಮ್ಮ ಅವಳ ಬರುವಿಕೆಗಾಗಿ ಕಾಯದೆ ತಾನೇ ರಥವನ್ನು ಎಳೆದಳು. ಹೀಗಾಗಿ ಎಲ್ಲಮ್ಮ ಅಲ್ಲಿಂದ ಮರಳಿ ಹೋದಳು. ತನಗೆ ಉಂಟಾದ ಅವಮಾನದ ಪ್ರತಿಯಾಗಿ ಈಗ ಸವದತ್ತಿಯ ಎಲ್ಲಮ್ಮ ಗೊಡಚಯ ವೀರಭದ್ರ ದೇವರ ಜಾತ್ರೆಗೆ ಬರಲಾರದೆ ತನ್ನ ಕೈ ಹಾಗೂ ನಂದಿಕೋಲುಗಳನ್ನು ಮಾತ್ರ ಕಳುಹಿಸುತ್ತಿರುವಳು ಎಂದು ಹೇಳುವರು. ಜಾತ್ರೆ ಮುಗಿದ ನಂತರ ತಮ್ಮ ಸ್ಥಾನಗಳಿಗೆ ಹೋಗುತ್ತಿರುವ ಭಕ್ತರು ಬಳೆ, ಫಲಹಾರ, ಬೆಂಡು–ಬೆತ್ತಾಸು, ಚುರುಮುರಿ ಪಳಾರವನ್ನು ಹಾಗೂ ಬೆಳುವಳ ಹಣ್ಣುಗಳನ್ನು ಕೊಂಡು ಹೋಗುವುದು ಒಂದು ಪದ್ಧತಿ. ಊರಿಗೆ ಹೋದ ನಂತರ ಆ ಫಲಹಾರ ಹಾಗೆಯೇ ಇಡುವರು. ಏಕೆಂದರೆ "ಭದ್ರಕಾಳಿಯು ತಮ್ಮ ಜೊತೆಯಲ್ಲಿ ಬಂದಿರುತ್ತಾಳೆ ಎಂಬ ನಂಬಿಕೆ ಅವರದು. ಪಳಾರದ ಗಂಟು ಪೂಜೆಗೊಳ್ಳಬೇಕು. ಭದ್ರಕಾಳಿಯು ಪೂಜಾ ಗೊಳ್ಳಬೇಕು. ಊರಿಗೆ ಬಂದ ಮರುದಿನವೇ ಜಂಗಮನನ್ನು ಕರೆದು ಪಾದ ಪೂಜೆ ಮಾಡುವರು. ಅವನು ಊಟ ಮಾಡಿ ಹೋದ ನಂತರವೇ ಪಳಾರದ ಗಂಟು ಪೂಜೆ ಮಾಡಿ ಬಿಚ್ಚುವರು".[15] ಭಕ್ತರ ಜೊತೆ ಬಂದಂತಹ ಭದ್ರಕಾಳಿಯು ಗೊಡಚಿಗೆ ಜಂಗಮರ ಜೊತೆ ಹೋಗುವಳು ಎಂಬ ನಂಬಿಕೆ ಜನಪದರಲ್ಲಿ ಬೇರೂರಿದೆ. ಇದೆತೆರನಾದ ಪದ್ಧತಿಯು ಎಲ್ಲಮ್ಮನ ಜಾತ್ರೆಗೆ ಹೋದ ಭಕ್ತರಲ್ಲಿಯೂ ಕಂಡುಬರುವುದು. ಅವರು ಇದೆ ಮಾದರಿಯಲ್ಲಿಯೇ ಪರಶುರಾಮನನ್ನು ಕಳುಹಿಸುವರು. ಇಂತಹ ಪದ್ಧತಿಯು ಗ್ರಾಮೀಣ ಜನಪದದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಇಂಥ ಪದ್ಧತಿಗಳ ನಂಬಿಕೆಯೆನೆಂದರೆ ಕಾಳಿ ಹಾಗೂ ಪರಶುರಾಮರು ಇವರ ರಕ್ಷಣೆಗೆಂದು ಬಂದಿರುತ್ತಾರೆಂತೆ.

ಪಂಚಾಳರು, ಬಡಿಗ, ಕಂಬಾರ, ಕುಂಬಾರರು ಕಾಳಮ್ಮನ ಬಗ್ಗೆ ಹೆಚ್ಚು ಭಕ್ತಿ ಗೌರವ ತೋರುತ್ತಿದ್ದರೆ. ಜಂಗಮ, ಬಣಜಿಗ ಹಾಗು ವೀರಶೈವರು ವೀರಭದ್ರನಿಗೆ ವಿಶೇಷ ಭಕ್ತಿ ತೋರಿಸುತ್ತಾರೆ. ಈ ಪಂಚಾಳರು ಸ್ತ್ರೀದೇವತಾ ಆರಾಧನ ಪರವಾಗಿದ್ದರೆ, ಇನ್ನುಳಿದವರು ಪುರುಷ ದೇವತಾ ಪರವಾಗಿರುವುದು ಅವರ ಆಚರಣೆ ಸಂಪ್ರದಾಯಗಳಲ್ಲಿ ಕಾಣುತ್ತೇವೆ. ಹಾಗೂ ಕಾಳಮ್ಮನ ಆರಾಧಕರಾದ ಪಂಚಾಳರು ತಯಾರಿಸಿದ ಕೃಷಿ ಸಲಕರಣೆಗಳನ್ನು, ವೀರಭದ್ರನ ಆರಾಧಕರಾದ ವೀರಶೈವ ಲಿಂಗಾಯತರು ಕೃಷಿ ಕಾಯಕದಲ್ಲಿ ಪಂಚಾಳರ ಕೃಷಿ ಸಲಕರಣೆಗಳನ್ನು ಉಪಯೋಗಿಸಿ ಉತ್ಪನ್ನಕಾರ್ಯ ಮಾಡುತ್ತಿರುವುದನ್ನು ಗಮನಿಸಿದರೆ, ಕಾಳಮ್ಮ ಮತ್ತು ವೀರಭದ್ರನಿಗೆ ಕರುಳ ಬಳ್ಳಿಯ ಸಂಬಂಧದಂತೆ. ವಿಶ್ವಕರ್ಮರು ಮತ್ತು

ವೀರಶೈವಲಿಂಗಾಯತರ ಕರುಳಬಳ್ಳಿ ಸಂಬಂಧವನ್ನು ಸಂಪ್ರದಾಯ, ಆಚರಣೆ, ಮತ್ತು ಕೃಷಿಕಾಯಕ ಚಟುವಟಿಕೆಯನ್ನು ಗಮನಿಸಿದಾಗ ಇರಬಹುದೆಂದೇನಿಸುತ್ತದೆ.

ಗುಗ್ಗಳ ಪುರವಂತರು ಒಡಬುಗಳು

ವೀರಭದ್ರನ ಭಕ್ತರಾದ ಪುರವಂತರು, ಧಾರ್ಮಿಕ ಎಲ್ಲಾ ವೇಷ–ಭೂಷಣಗಳನ್ನು ಧರಿಸಿಕೊಂಡು ರೌದ್ರತೆಯ ಸಂಕೇತವಾಗಿ ಪ್ರಳಯಕಾಲದ ಮಹಾರುದ್ರನಂತೆ ಕಾಣುವ ವೇಷವನ್ನು ಧರಿಸುತ್ತಾರೆ. ಸಹನಾಯಿ, ಶೃತಿ, ಡೋಲು, ಸಂಬಾಳಗಳ ತಾಳಗತ್ತಿನೊಂದಿಗೆ ಕುಣಿಯುತ್ತ, ಒಡಬು ಹೇಳುತ್ತಾ, ವಚನ ಹಾಡುತ್ತಾ, ರೌದ್ರಕುಣಿತ ಮಾಡುವರು. ಒಡಬು ಹೇಳುವಾಗ ಪ್ರತಿ ಚರಣಕ್ಕೆ ಉಳಿದವರು 'ಖಡೇ' ಎಂದು ಉದ್ಘರಿಸುವರು. ಆ ಒಡಬುಗಳು ವೀರಭದ್ರನ–ಕಾಳಮ್ಮನ ವ್ಯಕ್ತಿತ್ವವನ್ನು, ಪೌರಾಣಿಕ ಹಿನ್ನೆಲೆಯನ್ನು ಸಾರುತ್ತವೆ. ನಿದರ್ಶನಕ್ಕೆ ಒಡಬು ನೋಡಬಹುದಾಗಿದೆ.

ನಮ್ಮ ಶ್ರೀ ವೀರಭದ್ರ ದೇವರು ಹುಟ್ಟಿದಾಗಲೇ
ಹೂವಿನ ಕಾಶಿ, ವಿಷ್ಣುಕಾಶಿ, ಬ್ರಹ್ಮಕಾಶಿ, ಮೆಟ್ಟುವ ಹೊನ್ನಿನ ಅವಿಗೆ
ಸಾವಿರ ಶಿರಸ್ಸು, ಮುರುಸಾವಿರ ಕಣ್ಣು, ಎರಡು ಸಾವಿರ ಭುಜ
ಜಂಬುವೇಶ ಮುಂಗಲಿ, ಜಟಾ ಉರುಲು, ಶೆಡಕಿನ ಹಗ್ಗಾ
ಗಜದಾಂಡು ಗಜಾಂಕುಶ, ಚಪ್ಪಗೋಡಲಿ
ಚನ್ನವೀರಭದ್ರ ಬತ್ತೀಸಆಯುಧ ಪಿಡಿದು
ಕರಗಸದ ಬಾಣ, ಕುಂಜರದ ಚಾಕು
ಮಂಜು ಬೆರಗಣ್ಣು ಬಿಲ್ಲುಧರಿಸು, ಹೆಗ್ಗಾಳಿ ಪಿಡಿಯೋ ಗಂಡುಗತ್ತರಿ
ಕೈಯಂಬು ಕಠಾರಿ, ಈಟಿ ರಣ ಚೂರಿ ರೌದ್ರಾಕಾರದಿಂದ ಮಾಂಕರಿಸುತ್ತ
ಕೋಲಲಯಂದು ಹರಿದು ಹೋದುದಕ್ಕೆ ಬಂದು
ವಿಷ್ಣುವೇ ಮೊದಲಾದ ದೇವತೆಗಳನ್ನು ಸೆರೆಹಿಡಿದ
ದಕ್ಷಬ್ರಹ್ಮನ ಶಿರವನ್ನು ಅಗ್ನಿಗೆ ಆಹುತಿ ಕೊಟ್ಟು
ಸರಸ್ವತಿಯ ಮೂಗನೆ ಕೊಯ್ದು
ಅಗ್ನಿಯ ನಾಲಗೆ ಹರಿದು ಸಪ್ತಭಾಗಮಾಡಿ
ಅರವತ್ತಾರುಕೋಟಿ ರಾಕ್ಷಸರನ್ನು ಚಂಡಗಣ್ಣಿನಿಂದ ಸುಟ್ಟು
ಕೆಂಡವು ಪೋಕಳಿಯನ್ನು ಹಾಕುತ್ತ ಬರುತ್ತಿರಲು
ದಕ್ಷನು ಪತ್ನಿಯೂ ಬಂದು ಪಾದಕ್ಕೆ ಎರಗಲು
ಆಗ ನಮ್ಮ ಶ್ರೀವೀರಭದ್ರನು ಅವಳ ಪತಿಗೆ ಕುರಿತಲೆಯನಿಟ್ಟು
ಕೈಲಾಸಕ್ಕೆ ಬಂದದ್ದನ್ನು ಕಂಡು, ಶಿವನು ಭಪ್ಪರೆ ಭಲೆರೆ ಎಂದು
. ರತ್ನಕೆತ್ತಿದ ಸಿಂಹಾಸನದ ಮೇಲೆ ಕೂಡಿಸಿ
ಹೋಮಗಳಿಗೆರೆದನು ಖಡೇ: ಖಡೇ: [16]

ಉಪಸಂಹಾರ

ಹೀಗೆ ಪುರವಂತರು ಒಡಪು ಹೇಳುತ್ತ ಕುಣಿಯುವ ಸಂದರ್ಭದಲ್ಲಿ, ಶಸ್ತ್ರ ಚುಚ್ಚುವುದನ್ನು, ಲಿಂಬೆಹಣ್ಣು ಕತ್ತರಿಸುವ, ಈಡುಗಾಯಿ ಹೊಡೆಯುವುದು ನಡೆಯುತ್ತದೆ. ಪುರವಂತರಿಗೆ ಆವೇಶ ಹೆಚ್ಚಾಗಿ ಭಾವಪರವಶರಾಗಿ ರುದ್ರಾವತಾರವಾಗಿ ಕುಣಿಯುವಾಗ ನೋಡುವವರಿಗೆ ಮೈನವಿರೇಳುತ್ತದೆ. ಈ ಪುರವಂತರ ಸೇವಾಕಾರ್ಯವು ತಿಂಥಣಿ ಮೋನಪ್ಪಯ್ಯನ ಜಾತ್ರೆಯಲ್ಲಿ, ಶಿರಸಂಗಿ ಕಾಳಮ್ಮನ ಕಡೆಪಂಚಮಿ ಉತ್ಸವದಲ್ಲಿ, ವೀರಭದ್ರದೇವರ ಜಾತ್ರೆಯಲ್ಲಿ, ವೀರಶೈವಲಿಂಗಾಯತರ ಮದುವೆ ಸಂದರ್ಭದಲ್ಲಿ ಕೆಲ ಇತರ ದೇವತೆಗಳ ಜಾತ್ರೆ, ಉತ್ಸವ ಆಚರಣೆಯಲ್ಲಿಯೂ ಕಂಡುಬರುತ್ತದೆ. ಒಟ್ಟಾರೆ ಹೀಗೆ ವೀರಭದ್ರನ ಭಕ್ತರಾದ ವೀರಶೈವಲಿಂಗಾಯತರು ಗುಗ್ಗಳದ ಕಾರ್ಯವನ್ನು ಮತ್ತು ಕಾಳಮ್ಮನ ಭಕ್ತರಾದ ಪಂಚಾಳರು ಪುರವಂತರ ಕುಣಿತವನ್ನು, ಶಸ್ತ್ರಪವಾಡವನ್ನು, ಸಂಬಾಳ ಕರಡಿಮಜ್ಜಲು ವಾದ್ಯಗಳನ್ನು, ಗಮನಿಸಿದಾಗ ಧಾರ್ಮಿಕ, ಸಾಂಸ್ಕೃತಿಕ ಕಲಾ ಪ್ರಪಂಚ ಚಿತ್ತಾರಗೊಳ್ಳುತ್ತದೆ. ಹಾಗೂ ಕರ್ನಾಟಕದ ಆರಾಧನ ಪರಂಪರೆಯಲ್ಲಿ ವಿಶೇಷ ಉಗ್ರಆಚರಣೆಯಾಗಿ ಕಂಡುಬರುತ್ತದೆ. ಈ ಧಾರ್ಮಿಕ ಆಚರಣೆಯು ಸಾಂಸ್ಕೃತಿಕ ಅನನ್ಯತೆಯ ಆಚರಣೆಯಾಗಿ ಪ್ರಮುಖ ಪಾತ್ರವಹಿಸಿದೆ.

ಕೊನೆಟಿಪ್ಪಣಿಗಳು

1. ಹಿರೇಮಠ, ವ್ಹಿ.ಜಿ. (1994). *ವೀರಭದ್ರದೇವರು ಒಂದು ಸಾಂಸ್ಕೃತಿಕ ಅಧ್ಯಯನ.* ಪುಟ. 1
2. ಅದೆ, ಪುಟ. 2
3. ಅದೆ, ಪುಟ. 3
4. ಅದೆ, ಪುಟ. 5
5. ಅದೆ, ಪುಟ. 139–140
6. ಅದೆ, ಪುಟ. 140
7. ಅದೆ, ಪುಟ. 140
8. ಅದೆ, ಪುಟ. 156
9. ಅದೆ, ಪುಟ. 142
10. ಅದೆ, ಪುಟ. 143
11. ಅದೆ, ಪುಟ. 147–148
12. ಪಡಶೆಟ್ಟಿ, ಎಂ ಎಂ. (1990). *ತಿಂಥಿಣಿ ಮೋನಪ್ಪಯ್ಯ : ಒಂದು ಅಧ್ಯಯನ.* ಪುಟ.191
13. ಹಿರೇಮಠ, ವ್ಹಿ.ಜಿ. (1994). *ವೀರಭದ್ರದೇವರು ಒಂದು ಸಾಂಸ್ಕೃತಿಕ ಅಧ್ಯಯನ.* ಪುಟ. 158–159
14. ಅದೆ, ಪುಟ. 38
15. ಅದೆ,ಪುಟ. 118
16. ಪಡಶೆಟ್ಟಿ, ಎಂ ಎಂ. (1990). *ಪೂರ್ವೋಕ್ತ.* ಪುಟ. 192